**<u>ಸಾಕ್ಷಿಯನ್ನು ದಿಃ10.08.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ-</u>**

ನಾನು 9 ನೇ ತರಗತಿವರೆಗೆ ಓದಿರುತ್ತೇನೆ . ವಾದಿಯವರು ಸಲ್ಲಿಸಿರುವ ದಾವೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ . ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ . ಅದನ್ನು ನಾನೇ ಹೇಳಿ ಬರೆಸಿರುತ್ತೇನೆ . 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ . 3 ರಿಂದ 5 ನೇ ಪ್ರತಿವಾದಿಗಳು ನನ್ನ ಅಣ್ಣಂದೀರು . 6 ನೇ ಪ್ರತಿವಾದಿ ನನ್ನ ಅಕ್ಕ . 10 ನೇ ಪ್ರತಿವಾದಿ ನನ್ನ ಹೆಂಡತಿ .

2012 ರಲ್ಲಿ 10 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತೇನೆ . ನನ್ನ ತಂದೆ ಸರ್ಕಾರಿ ನೌಕರರಲ್ಲ . ಅವರು ಕೂಲಿ ಕೆಲಸ ಹಾಗೂ ವ್ಯವಸಾಯ ಮಾಡಿಕೊಂಡಿದ್ದರು . ಅದನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ . ನನ್ನ ತಾಯಿ 7 ನೇ ಪ್ರತಿವಾದಿ ಈಗ ತೀರಿಕೊಂಡಿರುತ್ತಾರೆ . ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಕೂಲಿ ಕೆಲಸ ಹಾಗೂ ವ್ಯವಸಾಯ ಮಾಡಿಕೊಂಡಿದ್ದರು ಎನ್ನುತ್ತಾರೆ .ನನ್ನ ಹುಟ್ಟಿದ ತಾರೀಖು ತಿಂಗಳು ಗೊತ್ತಿಲ್ಲ ಆದರೆ 1972 ರಲ್ಲಿ ಜನಿಸಿರುತ್ತೇನೆ . 2 ನೇ ಪ್ರತಿವಾದಿ ಗೌರಮ್ಮ ರವರ ಮದುವೆ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಕರನಾಗಿದ್ದೆ . ಅವರಿಗೆ ನನ್ನ ತಂದೆಯವರೆ ಮದುವೆ ಮಾಡಿರುತ್ತಾರೆ . ಅದೇ ರೀತಿ 6 ನೇ ಪ್ರತಿವಾದಿ ಕಾಳಮ್ಮನವರ ಮದುವೆಯನ್ನು ನನ್ನ ತಂದೆಯವರೆ ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ 4 ನೇ ಪ್ರತಿವಾದಿ ರಾಮಾ ಬೋವಿ ಖರ್ಚು ಹಾಕಿ ಮದುವೆ ಮಾಡಿರುತ್ತಾರೆ ಎನ್ನುತ್ತಾರೆ . ಅದನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ . 6 ನೇ ಪ್ರತಿವಾದಿ ಕಾಳಮ್ಮನವರ ಮದುವೆಯಾದಾಗ ನನಗೆ 18-19 ವರ್ಷವಾಗಿತ್ತು .

ವಾದಿ ಪಾರ್ವತಮ್ಮನವರ ಮದುವೆಯನ್ನು ನನ್ನ ತಂದೆಯೇ ಮಾಡಿದ್ದರು . ಅವರ ಮದುವೆ 1988-89 ರಲ್ಲಿ ಆಗಿರಬಹುದು ನಿಖರವಾಗಿ ನನಗೆ ಗೊತ್ತಿಲ್ಲ . ನಮ್ಮ ತಂದೆಗೆ ಅವರ ತಂದೆಯಿಂದ ಬಂದ ಮೂಲ ಆಸ್ತಿ ಯಾವುದು ಇರಲಿಲ್ಲ . ನನ್ನ ತಂದೆಗೆ ಸರ್ವೆ ನಂಬರ್ 141/1 ರಲ್ಲಿ 2 ಎಕರೆ 3 ಗುಂಟೆ ಮತ್ತು ಸರ್ವೆ 141/3 ರಲ್ಲಿ 1 ಎಕರೆ 4 ಗುಂಟೆ ಜಮೀನು ಇತ್ತು ಎಂದರೆ ಸರಿ . ಸದರಿ ಜಮೀನಿನ ಪಹಣಿ ಪತ್ರಿಕೆ

ನೋಡಿರುತ್ತೇನೆ . 2 ಸ್ವತ್ತುಗಳನ್ನು ದಿಃ 19.04.1962 ರಂದು ನನ್ನ ತಂದೆ ದೋಣಿಗೌಡರ ಮಗ ಚಿಕ್ಕೇಗೌಡರವರಿಗೆ ಬೋಗ್ಯ ಮಾಡಿದ್ದರು ಎಂದರೆ ಸರಿಯಲ್ಲ .

ನನಗೆ ಕನ್ನಡ ಓದಲು ಬರುತ್ತದೆ . ಸಾಕ್ಷಿಗೆ ನಿಪಿ. 54 ರಂತೆ ನಮ್ಮ ತಂದೆ ಚಿಕ್ಕೇಗೌಡರವರಿಗೆ ಬೋಗ್ಯ ಮಾಡಿದ್ದರು ಎಂದರೆ ಸರಿಯಲ್ಲ . ಸದರಿ ಸ್ವತ್ತು ಅವರ ಪಿತ್ರಾರ್ಜಿತವಾಗಿ ಬಂದಿದ್ದು ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ . ನನ್ನ ತಂದೆಗೆ ಸದರಿ ಸ್ವತ್ತು ಸ್ವಯಾರ್ಜಿತ ಆಸ್ತಿ ಎಂದು ಬರೆಸಿ ಹಾಕಿರುತ್ತೇನೆ , ಆದರೆ ಪಿತ್ರಾರ್ಜಿತವಾಗಿ ಬಂದ ಸ್ವತ್ತು ಅಲ್ಲ . ವಾದಿ ನ್ಯಾಯಾಲಯಕ್ಕೆ ಏನೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಎಂದು ನಾನು ನೋಡಿ ತಿಳಿದುಕೊಂಡಿಲ್ಲ . ವಕೀಲರ ಮೂಲಕ ನೋಡಿ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ . ಸರ್ವೆ ನಂಬರ್ 116/9 ರಲ್ಲಿನ 1 ಎಕರೆ ಜಮೀನು ನಿಮ್ಮ ತಾಯಿಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ಕೂಲಿ ಮಾಡಿ ಸ್ವಂತವಾಗಿ ಸಂಪಾದಿಸಿರುತ್ತಾರೆ ಎನ್ನುತ್ತಾರೆ . ಆ ವಿಚಾರವಾಗಿ ಪ್ರತಿವಾದ ಪತ್ರದಲ್ಲಿ ಬರೆಸಿ ಹಾಕಿಲ್ಲ ಆದರೆ ವಿಲ್ ಮಾಡಿದ ಬಗ್ಗೆ ಬರೆಸಿರುತ್ತೇನೆ . ಸದರಿ ಜಮೀನನ್ನು ದಿಃ 05.05.1983 ರಂದು ಒಟ್ಟು ಕುಟುಂಬದ ಪರವಾಗಿ ನನ್ನ ತಾಯಿಯ ಹೆಸರಿಗೆ ಖರೀದಿಸಿರುವುದು ಎಂದರೆ ಸರಿಯಲ್ಲ . ಆ ಸಮಯದಲ್ಲಿ ನಾನು , ವಾದಿ ಹಾಗೂ ಉಳಿದ ಪ್ರತಿವಾದಿಗಳೆಲ್ಲ ಬಾಲ್ಯದವರಿದ್ದೆವು . ಖಾತೆಯಾಗಿರುವುದು 1988-89 ನೇ ಸಾಲಿನಲ್ಲಿ . 1983 ರಲ್ಲಿ ವಾದಿಯ ಮದುವೆ ಯಾಗಿರಲಿಲ್ಲ ಆ ಸಮಯದಲ್ಲಿ ಎಲ್ಲಾ ಒಟ್ಟು ಕುಟುಂಬದಲ್ಲಿ ವಾಸ ಇದ್ದೆವು ಎಂದರೆ ಸರಿ . ಸರ್ವೆ ನಂಬರ್ 513/9 ರಲ್ಲಿನ 1 ಎಕರೆ ಜಮೀನನ್ನು 141/1 ಮತ್ತು 141/3 ರ ಜಮೀನಿನಿಂದ ಬಂದಂತಹ ಆದಾಯ ದಿಂದ ಖರೀದಿಸಿರುವುದು ಎಂದರೆ ಸರಿಯಲ್ಲ . ಸರ್ವೆ ನಂಬರ್ 26 ರ ಜಮೀನನ್ನು ಕ್ರಯಕ್ಕೆ ಪಡೆದಾಗ ವಾದಿಯ ಮದುವೆಯಾಗಿತ್ತು . ಆ ಜಮೀನನ್ನು ಖರೀದಿಸಿದಾಗಲೂ ವಾದಿ ಮತ್ತು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸ ಇದ್ದೆವು ಎಂದರೆ ಸರಿಯಲ್ಲ .

1989-90 ರವರೆಗೆ ಒಟ್ಟು ಕುಟುಂಬದಲ್ಲಿ ಇದ್ದು ನಂತರ ಬೇರೆ ಯಾಗಿರುತ್ತೇವೆ . ಸರ್ವೆ ನಂಬರ್ 42/ಪಿ 48 ರ 2 ಎಕರೆ ಜಮೀನು ನನ್ನ ತಂದೆಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಅವರೇ ಸ್ವತಃ ಕಾಡು ಕಡಿದು ಸಾಗುವಳಿ ಮಾಡುತ್ತಿದ್ದು , ಸರ್ಕಾರವೇ ಮಂಜೂರು ಮಾಡಿರುತ್ತದೆ . ಸಾಗುವಳಿಗೆ ಅರ್ಜಿಯನ್ನು ಯಾವಾಗ

ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ . ದಿ 09.04.1991 ರಲ್ಲಿ ಸಾಗುವಳಿಗೆ ಅರ್ಜಿಯನ್ನು ಕೊಟ್ಟಿದ್ದು ಎಂದರೆ ನನ್ನ ತಂದೆ ಕೊಟ್ಟಿದ್ದು ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ನಾವೆಲ್ಲ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದರೆ ಸರಿಯಲ್ಲ . ಅರ್ಜಿ ಕೊಡುವಾಗ ಏನೆಲ್ಲಾ ದಾಖಲೆಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಯಾವ ಸಾಲಿನಲ್ಲಿ ಸಾಗುವಳಿ ಮಂಜೂರಾಗಿರುತ್ತದೆ ಎಂದು ನಾನು ದಾಖಲೆಯನ್ನು ನೋಡಿಲ್ಲದ ಕಾರಣ ತಿಳಿದುಕೊಂಡಿಲ್ಲ . ಸರ್ವೆ ನಂಬರ್ 42/ಪಿ 48 ರ ಬಗ್ಗೆ ಅರ್ಜಿ ಸಲ್ಲಿಸುವಾಗ ಕುಟುಂಬದಲ್ಲಿ ಎಷ್ಟು ಜನ ವಾಸ ಇದ್ದಾರೆ ಎಂದು ಬರೆಸಿದ್ದಾರೆ ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ . 10 ಜನ ವಾಸ ಮಾಡುತ್ತಿರುವುದಾಗಿ ಬರೆಸಿ ಹಾಕಿರುತ್ತಾರೆ .

ನಾನು ಮತ್ತು ನನ್ನ ಅಣ್ಣ ತಮ್ಮಂದೀರೆಲ್ಲ ವಿಭಾಗ ಪತ್ರ ಮಾಡಿಸಿಕೊಂಡಿಲ್ಲ ಆದರೆ ದಾನ ಪತ್ರ ಮಾಡಿಸಿಕೊಂಡಿದ್ದೇವೆ ಅದನ್ನು ತಂದೆಯೇ ಬರೆಸಿ ಕೊಟ್ಟಿರುತ್ತಾರೆ . ದಿಃ 22.04.2009 ರಲ್ಲಿ ಬರೆದುಕೊಟ್ಟಿರುತ್ತಾರೆ . ಆ ಸಮಯದಲ್ಲಿ ನಾವು ಬೇರೆ ಬೇರೆ ಇದ್ದೆವು . ಖಾತೆಗಳು ಬೇರೆ ಬೇರೆ ಇದ್ದವು . ವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ . ದಿಃ 18.05.1998 ರಲ್ಲಿ ಸ್ವತ್ತನ್ನು ಖರೀದಿಸಿರುತ್ತೇನೆ . ಆಗ ನಾವು ಒಟ್ಟು ಕುಟುಂಬದಲ್ಲಿ ಇರಲಿಲ್ಲ . ಆಗ ನಾನು ಗಾರೆ ಕೆಲಸ ಮಾಡಿಕೊಂಡಿದ್ದೆ . ಒಟ್ಟುಕುಟುಂಬದ ಆಸ್ತಿ ಎಂದು ದಾಖಲೆ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.